ವಿವರಗಳನ್ನು ಕಳುಹಿಸಿಕೊಡುವಂತೆ ಕೋರಲಾಗಿದೆ. ಮಹಾರಾಷ್ಟ್ರದ ಬ್ಯಾರೇಜನ್ನು ಎತ್ತರಿಸುವ ಕುರಿತು ನಿಖರವಾದ ಮಾಹಿತಿಯನ್ನು ಪಡೆದು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

1619 (2305) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ್ ಸಡಕ್ ಯೋಜನೆಯಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಇದಕ್ಕಾಗಿ ವೆಚ್ಚ ಮಾಡಲಾದ ಹಣವೆಷ್ಟು;

ಇ) ಎಷ್ಟು ಕಾಮಗಾರಿಗಳು ಜಾರಿಯಲ್ಲಿವೆ (ವಿವರ ಒದಗಿಸುವುದು);

ಈ) ಈ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಬೀದರ್ ಜಿಲ್ಲೆಯ ಹುಲಸೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ್ ಸಡಕ್ ಯೋಜನೆಯಲ್ಲ ಕಳೆದ 2 ವರ್ಷಗಳಲ್ಲಿ ಒಂದು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಅದರ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ರಸ್ತೆಯ ಉದ್ದ (ಕಿ.ಮೀ)	ಅಂದಾಜು ಮೊತ್ತ	ವೆಚ್ಚವಾದ ಮೊತ್ತ
1	ಭಾಲ್ಕಿ ತಾಲ್ಲೂಕಿನ ವರವಟ್ಟಿ ವಾಡಿ ರಸ್ತೆ	2.27	34.15	34.15

ಆ) ಸದರಿ ಕಾಮಗಾರಿಗೆ ಮಾಡಲಾದ ವೆಚ್ಚ ರೂ.34.15 ಲಕ್ಷಗಳು.

ಇ) ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಲ್ಲಿ ಮೂರು ಕಾಮಗಾರಿಗಳು ಜಾರಿಯಲ್ಲಿದ್ದು, ವಿವರ ಕೆಳಕಂಡಂತಿದೆ.

ಹಂತ	ಕಾಮಗಾರಿಯ ಹೆಸರು	ರಸ್ತೆಯ ಉದ್ದ (ಕಿ.ಮೀ)	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ವೆಚ್ಚವಾದ ಮೊತ್ತ (ರೂ.ಲಕ್ಷಗಳಲ್ಲಿ)
IV	ಸೋನಕೆರಾದಿಂದ ದುಬಲಗುಂಡಿ ವಾಯಾ ಚಂದನಹಳ್ಳಿ	8.00	126.52	48.23
V	ಬಾಲ್ಕಿ–ನಿಲಂಗಾ ರಸ್ತೆಯಿಂದ ವಾಗಲಗಾಂವ ವಾಯಾ ಜಿರಗ್ಯಾಳ	5.2	87.40	19.75
V	ಮೆಹಕರದಿಂದ ವಾಂಜರಖೇಡ ವಾಯಾ ಕೊಂಗಳಿ	6.5	133.77	0.00

ಈ) ಸದರಿ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ನಿರ್ಮಿಸಲಾಗಿರುತ್ತದೆ. SQMಗಳ ಪರಿವೀಕ್ಷಣಾ ವರದಿಯಲ್ಲಿ ಕಾಮಗಾರಿಗಳ ಗುಣಮಟ್ಟ ತೃಪ್ತಿಕರವೆಂದು ತಿಳಿಸಿರುತ್ತಾರೆ.

ಉ) ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಕಂಡು ಬಂದಿರುವುದಿಲ್ಲ. ಸದರಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು 3 ಟಾಯರ್ ಕ್ವಾಲಿಟಿ ಕಂಟ್ರೋಲ್ ವ್ಯವಸ್ಥೆ ಮಾಡಲಾಗಿರುತ್ತದೆ. ಇದರಲ್ಲಿ National Quality Monitor, State Quality Monitor, ಕಾರ್ಯನಿರ್ವಾಹಕ ಇಂಜಿನಿಯರ್, ಗುಣ ನಿಯಂತ್ರಣ ವಿಭಾಗ ಮತ್ತು ಮೇಲಾಧಿಕಾರಿಗಳು ಇವರ ಪರಿವೀಕ್ಷಣೆಯಲ್ಲಿ ಕೆಲಸ ತೆಗೆದುಕೊಳ್ಳಲಾಗಿರುತ್ತದೆ ಅಲ್ಲದೆ ಕಾಮಗಾರಿ ಸ್ಥಳಗಳಲ್ಲಿ ಪ್ರಯೋಗ ಶಾಲೆಗಳನ್ನು ಸ್ಥಾಪಿಸಲಾಗಿದ್ದು, ಕಾಮಗಾರಿಗೆ ಉಪಯೋಗಿಸಲಾಗುತ್ತಿದ್ದ ಸಾಮಗ್ರಿಗಳನ್ನು ಪರೀಕ್ಷೆಗೆ ಒಳಪಡಿಸಿ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತಿದೆ.